ಸಾರಿಗೆ ವ್ಯವಸ್ಥೆಯ ಸುಧಾರಣೆಯ ಬಗ್ಗೆ

೪೭೭. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬೆಂಗಳೂರಿನ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸಲು ಸರ್ಕಾರದ ಮುಂದೆ ಇರುವ ಯೋಜನೆಗಳಾವವು ;

ಆ) ರ್ಯಾಪಿಡ್ ಟ್ರಾನ್ಸ್‌ಪೋರ್ಟ್ ಸಿಸ್ಟಂ ಬಗ್ಗೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೇ ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು).—

ಅ) ೧) ಸಾರಿಗೆ ಬೇಡಿಕೆಗನುಗುಣವಾಗಿ ೮೧ ಷೆಡ್ಯೂಲ್‌ಗಳನ್ನು ಹೆಚ್ಚಿಸುವುದು.

೨) ತೊಂದರೆ ರಹಿತ ಸಾರಿಗೆ ಸೇವೆ ಒದಗಿಸುವ ಸಲುವಾಗಿ ೧೧೧ ಹಳೇ ವಾಹನಗಳನ್ನು ಬದಲಾಯಿಸುವುದು. ೧೯೯೦–೯೧ನೇ ಸಾಲಿನಲ್ಲಿ ನಗರ ಸಾರಿಗೆ ವಿಭಾಗಕ್ಕೆ ಒಟ್ಟು ೧೮೨ ಹೊಸ ಬಸ್ಸುಗಳನ್ನು ಸೇರಿಸಲಾಗುವುದು.

೩) ಈ ದಿಸೆಯಲ್ಲಿ ವಿಶ್ವ ಬ್ಯಾಂಕಿನ ಆರ್ಥಿಕ ನೆರವನ್ನು ಪಡೆದು ಮೂಲಭೂತ ಸೌಲಭ್ಯಗಳಿಂದ ಬಸ್ ಡಿಪೋ ಮತ್ತು ವರ್ಕ್‌ಷಾಪ್‌ಗಳನ್ನು ಹೆಚ್ಚಿಸುವ ಯೋಜನೆಯನ್ನು ರೂಪಿಸಲಾಗಿದೆ.

೪) ಬಸ್ ನಿಲ್ದಾಣ ಮತ್ತು ಬಸ್ ಟರ್ಮಿನಲ್ಸ್‌ಗಳಂತಹ ಪ್ರಯಾಣಿಕರ ಸೌಲಭ್ಯಗಳನ್ನು ಒದಗಿಸುವುದು.

ಆ) ೧೯೮೩ರಲ್ಲಿ ನಿರ್ದೇಶಕರು, ನಗರ ಯೋಜನೆ ಇವರು ಬೆಂಗಳೂರಿನಲ್ಲಿ ಶೀಘ್ರಸಾರಿಗೆ ವ್ಯವಸ್ಥೆಗೋಸ್ಕರವಾಗಿ ರೂ. ೬೫೦ ಕೋಟಿಗಳ ಅಂದಾಜು ಮೆಚ್ಚಿದಲ್ಲಿ ಒಂದು ಯೋಜನಾ ವರದಿಯನ್ನು ತಯಾರಿಸಿ ನೀಡಿದ್ದರು. ಹಣದ ಅವಶ್ಯಕತೆಯಿಂದಾಗಿ ಈ ಯೋಜನೆಯನ್ನು ಮುಂದು ವರೆಸಲು ಆಗಲಿಲ್ಲ.

ಬಿ.ಎಂ.ಆರ್.ಡಿ.ಎ.ಯೂ ಕೂಡ ರೈಟ್ಸ್ ಎಂಬುವವರಿಂದ ರೂ. ೨೦೫ ಕೋಟಿಗಳ ಅಂದಾಜು ಮೆಚ್ಚಿದಲ್ಲಿ ಬೆಂಗಳೂರು ನಗರ ಸಾರಿಗೆ ಯೋಜನೆಗಾಗಿ 'ಮ್ಯೂಟರ್ ರೈಲ್' ಎಂಬ ಶೀರ್ಷಿಕೆಯಲ್ಲಿ ಕಾರ್ಯಗತಗೊಳಿಸಬಲ್ಲ ವರದಿಯನ್ನು ಪಡೆದಿದ್ದು ಬೆಂಗಳೂರು ನಗರದಲ್ಲಿ ಅವಶ್ಯಕತೆ ಇರುವ ಕಡೆಗಳಲ್ಲಿ ಕಮ್ಯೂಟರ್ ರೈಲ್ ವ್ಯವಸ್ಥೆಯನ್ನು ಜಾರಿಗೆ ತರುವ ಯೋಜನೆಯ ವರದಿಯನ್ನು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯು ಪರಿಶೀಲಿಸುತ್ತಿರುವುದು.

ಬಾರ್ಡರ್ ಏರಿಯಾದ ಜನರು ತೊಂದರೆ ಅನುಭವಿಸುವುದರ ಬಗ್ಗೆ

೪೭೬. ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಕರ್ನಾಟಕ ರಾಜ್ಯದ ಗಡಿ ಪ್ರದೇಶ (ಗಡಿಯಿಂದ ೫ ಕಿ.ಮೀ. ದೂರದ ಪ್ರದೇಶ) ವನ್ನು ಬಾರ್ಡರ್ ಏರಿಯಾ ಎಂದುದಾಗಿ ಘೋಷಣೆ ಮಾಡಿರುವುದರಿಂದ ಜನಸಾಮಾನ್ಯರಿಗೆ ಆಹಾರ ಸಾಮಾಗ್ರಿಗಳು ದೊರೆಯದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಆಜೀಜ್ ಸೇಠ್ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಇಲ್ಲಿಯವರೆಗೆ ಬಂದಿಲ್ಲ, ಆದರೂ ಇಂತಹ ಸಮಸ್ಯೆ ಬರಬಹುದೆಂದು ಗ್ರಹಿಸಿ ಸರ್ಕಾರವು ಕೆಲವು ಕ್ರಮಗಳನ್ನು ಕೈಗೊಂಡಿದೆ.

ಆ) ಗಡಿ ಪ್ರದೇಶಗಳಲ್ಲಿ ವಾಸಿಸುವ ನಿವಾಸಿಗಳಿಗೆ ಸ್ವಂತ ಉಪಯೋಗಕ್ಕಾಗಿ ಅಕ್ಕಿಯನ್ನು ಸಾಗಾಣಿಸಲು ಪರವಾನಗಿಯನ್ನು ನೀಡುವಂತೆ ಗಡಿ ಪ್ರದೇಶ ಹೊಂದಿರುವ ತಾಲ್ಲೂಕುಗಳ ತಹಶೀಲ್ದಾರರಿಗೆ ಆಯಾ ಜಿಲ್ಲಾಧಿಕಾರಿಗಳು ಸೂಚನೆ ನೀಡಿದ್ದಾರೆ, ಇದಲ್ಲದೇ ಗಡಿ ಪ್ರದೇಶದಲ್ಲಿ ವಾಸಿಸುವ ಪಡಿತರ ಚೀಟಿ ಹೊಂದಿರುವ ನಿವಾಸಿಗಳಿಗೆ ಯಾವುದೇ ನಿರ್ಬಂಧವಿಲ್ಲದೇ ಆಹಾರ ಧಾನ್ಯಗಳು ಲಭ್ಯವಾಗುವಂತೆ ಜಿಲ್ಲಾಪರಿಷತ್ತುಗಳು ಆಹಾರಧಾನ್ಯಗಳನ್ನು ವಿತರಿಸುತ್ತವೆ.

ಕರ್ನಾಟಕ ಅಕ್ಕಿ ಸಂಗ್ರಹಣಾ (ಲೆವಿ) ಆದೇಶ, ೧೯೮೪ನ್ನು ಸೂಕ್ತವಾಗಿ ತಿದ್ದುಪಡಿ ಮಾಡಲಾಗಿದೆ